ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು):-

I. (ಶ್ರೀ ಎಂ. ವೀರಪ್ಪ ಮೊಯಿಲಿ, ಮುಖ್ಯಮಂತ್ರಿ ಪರವಾಗಿ)

1978ನೇ ಸಾಲಿನ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ ಅನುಚ್ಛೇದ 8ರ ಉಪ ಅನುಚ್ಛೇದ (3)ರ ಮೇರೆಗೆ

1. ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯ ಭೋದಕೇತರ ಸಿಬ್ಬಂದಿಯ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತರುವ ಬಗ್ಗೆ ದಿನಾಂಕ: 14-12-1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ:40:ಎಸ್ಆರ್‌ಡಿ:92ನ್ನು,

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ

2. 1990-91ನೇ ಸಾಲಿನ ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್‌ನ ವಾರ್ಷಿಕ ವರದಿಯನ್ನು ಸಭೆಯ ಮುಂದುಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ - ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು,:-

II. (ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ ಅವರ ಪರವಾಗಿ)

1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48 (5)ನೇ ಕಲಮಿನ ಮೇರೆಗೆ

1. 1991-92ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ.

2. 1990-91ನೇ ಸಾಲಿನ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ.

3. 1991-92ನೇ ಸಾಲಿನ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು:- ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು ವಿಧಾನಸಭೆ ಮತ್ತು ಅಧ್ಯಕ್ಷರು ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ):- ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ 6ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ):- ಮಾನ್ಯ ಅಧ್ಯಕ್ಷರೇ ರಾಜ್ಯ ಸರ್ಕಾರ ಕಂಪನಿಗಳ ವ್ಯವಸ್ಥಾಪಕ ಮಂಡಳಿಯ ಕೆಲವು ವಿಷಯಗಳ ಮೇಲಿನ 5ನೇ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ 3ನೇ ವರದಿಯಲ್ಲಿನ ಶಿಫಾರಸ್ಸುಗಳ ಸಂಬಂಧದಲ್ಲಿ ಸರ್ಕಾರದವರು ಕೈಕೊಂಡ ಕ್ರಮದ ಮೇಲಿನ 55ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಕ್ಕುಚ್ಯುತಿ ನಿರ್ಣಯ

''ಮೈಸೂರಿನಲ್ಲಿ 8.12.92ರಂದು ನಡೆದಂತಹ ಹಿಂದೂ ಮುಸ್ಲಿಂ ಗಲಭೆಗೆ ಮಾನ್ಯ ಆಜೀಜ್ ಸೇಠ್ ಜವಾಬ್ದಾರರು ಎಂದು ಜನರು ಹೇಳುತ್ತಿರುವುದರಿಂದ ತನಿಖೆ'' ಮಾಡುವ ಬಗ್ಗೆ.

ಅಧ್ಯಕ್ಷರು:- ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಆಜೀಜ್ ಸೇಠ್‌ರವರು ನಿಯಮ 191ರ ಮೇರೆಗೆ ಒಂದು ಹಕ್ಕುಚ್ಯುತಿ ಸೂಚನೆ ಬಗ್ಗೆ ತಿಳುವಳಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಮಾನ್ಯ ಸದಸ್ಯರಾದಂತ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರತಕ್ಕಂತ ಸುದ್ದಿ ತಾವು ಹೇಳಿರತಕ್ಕಂಥಾದ್ದೆ ಇಲ್ಲವೇ ಅದರ ಬಗ್ಗೆ ವಿವರಣೆ ಕೊಡಬೇಕೆಂದು ಅವರನ್ನು ಕೇಳಿದಾಗ ಅವರು ಈ ಕೆಳಕಂಡ ಪತ್ರವನ್ನು ನನಗೆ ಕಳುಹಿಸಿದ್ದಾರೆ.

> '' ಮಾನ್ಯರೇ, ಮಾನ್ಯ ಆಜೀಜ್ ಸೇಠ್‌ರವರು ನಿಯಮ 191ರ ಮೇರೆಗೆ ನೀಡಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ತಾವು ಕೇಳಿರುವ ವಿವರಣೆಯನ್ನು ಈ ಕೆಳಕಂಡಂತೆ ನೀಡಬಯಸುತ್ತೇನೆ. ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಗಲಭೆಗೆ ಮಾನ್ಯ ಆಜೀಜ್ ಸೇಠ್‌ರವರು ಜವಾಬ್ದಾರರು ಎಂದು ಜನರು ಹೇಳುತ್ತಿರುವುದರಿಂದ ಇದರ ಬಗ್ಗೆ ತನಿಖೆ ಆಗಬೇಕೆಂದು 8.12.92ರಂದು ಮೈಸೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದೇನೆಯೇ ಹೊರತು, ಮಾನ್ಯ ಆಜೀಜ್ ಸೇಠ್‌ರವರು ಜವಾಬ್ದಾರರು ಎಂದು ವೈಯಕ್ತಿಕವಾಗಿ ಹೇಳಿಲ್ಲ. ದಿನಾಂಕ 8.12.92ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವರದಿಯಾಗಿರುವುದು ಸರಿಯಲ್ಲ ಇದನ್ನು ಸದನದಲ್ಲಿ ಈ ಬಗ್ಗೆ ಸ್ಪಷ್ಟಪಡಿಸಿದ್ದೇನೆ.''

ಈ ವಿವರಣೆ ಬಂದ ಮೇಲೆ ಹಕ್ಕುಚ್ಯುತಿ ಸೂಚನೆ....

SRI AZEEZ SAIT: Mr.Speaker Sir, it is not only in one paper, in other paper also, the hon'ble member has categorically stated that he has enough of evidence to prove it on the floor of this House. Earlier he has made a statement when the Hon'ble Deputy Speaker has asked him, whether he would deny it or not, he said 'I don't deny'. That was the first question. The chair can take out the proceedings of this House. He has categorically said that he is not going to deny. Later on, when he understood the consequence of the Privilege Motion, he has changed his wordings in the very same House. Even that is in the record. He has not said it; ie., since somebody told him, he has stated it. I have given enough of evidence to the paper. He has also stated that the Home Secretary had made a statement saying that some invisible hands are there. When he had told my name, the Home Secretary has said, it is not fair to bring his name. Even that is there. I don't think any more evidence is required. So, the Hon'ble Member has to prove it on the Floor of the House or he has to apologise for the act because at this age I cannot have black trademark on my face. I have been a public servant for the last 46 years and nobody has said that I am involved in such things, and it is clear-cut. It has pained me and it has humiliated me. Moreover, his own colleague Sri Maruthi Rao Pawar, to cover his